**ಪ್ರಧಾನ ಸಿವಿಲ್ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡ ಅಧಿಕಾರಿಗಳ ನ್ಯಾಯಾಲಯ,**
**ಸುರಪುರ.**

| | |
|---|---|
| ಒ.ಎಸ್. ನಂ | 249/2024 |
| ಪಿ.ಡಬ್ಲ್ಯೂ | 1 |
| ದಿನಾಂಕ | 06.08.2025 |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

ನಾನು ನನ್ನ ಮುಖ್ಯ ವಿಚಾರಣೆಯಾಗಿ ಶಪಥ ಪತ್ರವನ್ನು ಸಲ್ಲಿಸಿದ್ದು ಶಪಥ ಪತ್ರದಲ್ಲಿ ಬರೆಸಿರುವುದನ್ನು ನಾನು ಹೇಳಿ ಬರೆಯಿಸಿದ್ದು ನಂತರ ಅದನ್ನು ಓದಿ ಸಹಿ ಮಾಡಿರುತ್ತೇನೆ. ಶಪಥ ಪತ್ರದಲ್ಲಿ ಬರೆದಿರುವುದು ಎಲ್ಲಾ ಸತ್ಯವಾಗಿರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆಯಾಗಿ ಅಳವಡಿಸಿಕೊಳ್ಳಲು ವಿನಂತಿಸಿಕೊಳ್ಳುತ್ತೇನೆ. ಸಾಕ್ಷಿಯ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯಾಗಿ ಅಳವಡಿಸಿಕೊಳ್ಳಲಾಯಿತು.

**ಮುಖ್ಯ ವಿಚಾರಣೆ : ಶ್ರೀ ಎಮ್ ಕೆ ವಕೀಲರಿಂದ**

ಸರ್ವೇ ನಂ.25/9 1988-89 ರಿಂದ 2001-02 ರ ಒಟ್ಟು 4 ಕೈ ಬರಹ ಪಹಣಿಗಳನ್ನು ನಿಪಿ1 ರಿಂದ 4, ದೃಡಿಕೃತ ಮ್ಯೂಟೇಶನ್ ನಂ.45 ಅನ್ನು ನಿಪಿ5, ಮ್ಯೂಟೇಶನ್ ನಂ.46 ಅನ್ನು ನಿಪಿ6, ಸರ್ವೇ ನಂ.35/9ಅ 2002-03 ರಿಂದ 2009-10 ಒಟ್ಟು 8 ವರ್ಷಗಳ ಗಣಕೀಕೃತ ಪಹಣಿಗಳನ್ನು ನಿಪಿ7 ರಿಂದ 14, ಸರ್ವೇ ನಂ. 35 2010-11 ರಿಂದ 2011-12 ಗಣಕೀಕೃತ ಪಹಣಿಗಳನ್ನು ನಿಪಿ15 ಮತ್ತು 16, ಸರ್ವೇ ನಂ.35/3 2011-12 ರಿಂದ 2013-14 ಒಟ್ಟು ಮೂರು ವರ್ಷದ ಗಣಕೀಕೃತ ಪಹಣಿಗಳನ್ನು ನಿಪಿ17 ರಿಂದ 19, ಸರ್ವೇ ನಂ.35/10 2014-15 ಗಣಕೀಕೃತ ಪಹಣಿಯನ್ನು ನಿಪಿ20, ಸರ್ವೇ ನಂ.35/3 2015-16 ರಿಂದ 2019-2020 ಒಟ್ಟು 5 ವರ್ಷದ ಗಣಕೀಕೃತ ಪಹಣಿಗಳನ್ನು ನಿಪಿ21 ರಿಂದ 25, ಸರ್ವೇ ನಂ.35/16 2024-25 ಗಣಕೀಕೃತ ಪಹಣಿಯನ್ನು ನಿಪಿ26, ಎಮ್ ಆರ್ ನಂ.9 2009-10 ರ ಐದು ಪುಟಗಳುಳ್ಳ ಮ್ಯೂಟೇಶನ್ ಪ್ರತಿಗಳನ್ನು ಒಟ್ಟಾರೆಯಾಗಿ ನಿಪಿ27, ತಹಶೀಲ್ದಾರರು ಇವರು ನೀಡಿದ ಸ್ವೀಕೃತಿಯ ಪ್ರತಿಯನ್ನು ನಿಪಿ28, ದಿನಾಂಕ 07.08.2024 ರ ಗಣಕೀಕೃತ ಖರಿದಿ ಪತ್ರವನ್ನು ನಿಪಿ29 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಮ್ ಕೆ ವಕೀಲರು ಮುಂದುವರೆ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಹಾಗೂ ಪ್ರಥಮ
ದರ್ಜೆ ನ್ಯಾಯಿಕ ದಂಡ ಅಧಿಕಾರಿಗಳ
ನ್ಯಾಯಾಲಯ, ಸುರಪುರ.